# ಪವಿತ್ರ ಪತ್ರಮಾಲೆ

# ಸ್ವಾಮಿ ಶಿವಾನಂದಜಿ ಅವರ ಒಂದು ಪತ್ರ



ರಾಮಕೃಷ್ಣ ಮಠ
ಬೇಲೂರು, ಹೌರಾ
೧೭. ೭. ೧೯೧೯

ಪ್ರೀತಿಯ...

ಕೆಲವು ದಿವಸಗಳ ಹಿಂದೆ ನಿನ್ನ ಕಾಗದ ಬಂದು ತಲುಪಿತು. ಬಹಳ ದಿನಗಳ ನಂತರ ನೀನು ಮದ್ರಾಸಿನ ಮಠಕ್ಕೆ ವಾಪಸ್ಸು ಬಂದಿರುವೆಯೆಂದು ತಿಳಿದು ಸಂತೋಷವಾಯಿತು. ಈಗ ನಿನ್ನ ಆರೋಗ್ಯ ಬಹುಮಟ್ಟಿಗೆ ಸುಧಾರಿಸಿದೆಯೆಂದು ತಿಳಿದು ಆನಂದವಾಯಿತು. ಹಾಗೆಯೇ ಬಹುಕಾಲದ ನಂತರ ಭಕ್ತರನ್ನು ಭೇಟಿ ಮಾಡುವುದರಲ್ಲಿ ನಿನಗೆ ತುಂಬ ಸಂತೋಷವಾಗುತ್ತಿದೆಯೆಂದು ತಿಳಿದು ಹರ್ಷವಾಯಿತು. ಕಾಲಕಾಲಕ್ಕೆ ಈ ರೀತಿ ಸ್ಥಳವನ್ನು ಬದಲಾಯಿಸುವುದು ನಿಜಕ್ಕೂ ಒಳ್ಳೆಯದು. ನಿನ್ನ ಮೇಲೆ ನನ್ನ ಹೃದಯಪೂರ್ವಕ ಪ್ರೇಮ ಮತ್ತು ಅಭಿನಂದನೆಗಳು ಯಾವಾಗಲೂ ಇರುತ್ತವೆ ಎನ್ನುವುದರಲ್ಲಿ ನಿನಗೆ ಯಾವ ಸಂದೇಹವೂ ಬೇಡ. ನಿನ್ನ ಹೃದಯವನ್ನು ಪ್ರೀತಿ, ಶ್ರದ್ಧೆ, ಜ್ಞಾನ ಮತ್ತು ಭಕ್ತಿಗಳಿಂದ ತುಂಬಿಬಿಡಲಿ ಎನ್ನುವುದೇ ಭಗವಂತನಲ್ಲಿ ನನ್ನ ಪ್ರಾರ್ಥನೆ.

ಭಕ್ತರು ವಿದ್ವಾಂಸರಾಗಬೇಕಾಗಿಲ್ಲ. ಅವರಿಗೆ ಇರಬೇಕಾದ್ದು ಪ್ರಾಮಾಣಿಕವಾದ ತ್ಯಾಗಭಾವನೆ ಹಾಗೂ ಸರಿ ತಪ್ಪುಗಳನ್ನು ವಿಂಗಡಿಸಿ ನೋಡುವ ವಿವೇಕಬುದ್ಧಿ. ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರು: "ನಿನ್ನನ್ನು ನೀನು ಕೊಂದುಕೊಳ್ಳಬೇಕಾದರೆ, ಒಂದು ಉಗುರುಕತ್ತರಿಯಷ್ಟೇ ಸಾಕು. ಆದರೆ ಇನ್ನೊಬ್ಬರನ್ನು ಕೊಲ್ಲಬೇಕಾದರೆ, ಕತ್ತಿ, ಗುರಾಣಿ ಮತ್ತಿತರ ಅನೇಕ ಆಯುಧಗಳನ್ನು ಇಟ್ಟುಕೊಂಡಿರಬೇಕಾಗುತ್ತದೆ." ಇದೇ ರೀತಿ, ನಿನ್ನ ಸ್ವಂತ ಮುಕ್ತಿಗಾಗಿ ಅಷ್ಟೊಂದು ವಿದ್ವತ್ತಿನ ಆವಶ್ಯಕತೆಯಿಲ್ಲ. ಭಗವಂತನ ಪುಣ್ಯನಾಮವನ್ನು ಸದಾ ಉಚ್ಚರಿಸುತ್ತ ಹೋಗು. ಇದೇ ಸಾಕು. ಶಾಸ್ತ್ರಗಳು ಇದರ ಬಗ್ಗೆ ಅನೇಕ ಉದಾಹರಣೆಗಳನ್ನು ನೀಡುತ್ತವೆ. ಆದರೆ ನೀನು ಬೇರೆಯವರಿಗೆ ಬೋಧಿಸುವ ಕಾರ್ಯವನ್ನು ಕೈಗೆತ್ತಿಕೊಂಡರೆ, ಆಗ ಮಾತ್ರ ಅದಕ್ಕೆ ಎಲ್ಲ ರೀತಿಯಲ್ಲಿಯೂ ಸನ್ನದ್ಧನಾಗಿರಬೇಕಾಗುತ್ತದೆ. ಆದರೆ ನಿನಗೆ ಬೇರೆಯವರಿಗೆ ಬೋಧಿಸುವ ಯಾವ ಇಚ್ಛೆಯೂ ಇದ್ದ ಹಾಗೆ ಕಾಣುವುದಿಲ್ಲ. ಈಗ ನೀನು ಏನು ತಿಳಿದುಕೊಂಡಿದ್ದೀಯೋ ಅದಷ್ಟೇ ನಿನ್ನ ಉದ್ದೇಶದ ಸಿದ್ಧಿಗೆ ಬೇಕಾದಷ್ಟು ಸಾಕು. ನಿನಗೀಗ ಬೇಕಾದದ್ದು ಏನೆಂದರೆ ಭಗವದ್ಭಾವದಲ್ಲಿ ಆಳವಾಗಿ ಮುಳುಗುವುದು. ನಿನಗೆ ಇನ್ನೇನಾದರೂ ಬೇಕಾದರೆ ಸರ್ವಶಕ್ತಿಶಾಲಿನಿಯಾದ ಜಗನ್ಮಾತೆಯು ಸರಿಯಾದ ಸಮಯದಲ್ಲಿ ಅದನ್ನು ಖಂಡಿತ ಪೂರೈಸುವಳು. ಭಕ್ತನಾದವನು ಜಗನ್ಮಾತೆಯನ್ನು ಯಾವಾಗಲೂ ಅವಲಂಬಿಸಿರಬೇಕು. ಆಕೆಯ ಅನುಗ್ರಹದಿಂದ ಭಕ್ತನು ತನಗೆ ಬೇಕಾದುದನ್ನೆಲ್ಲವನ್ನೂ ಪಡೆದುಕೊಳ್ಳುವನು. ಎಲ್ಲ ಶಾಸ್ತ್ರಗಳೂ ಆ ಜಗನ್ಮಾತೆಯ ಮನಸ್ಸಿನಲ್ಲಿಯೇ ಜೀವಂತವಾಗಿ, ಪರಿಶುಭ್ರವಾಗಿ, ಅನುಷ್ಠಾನಯೋಗ್ಯವಾಗಿ ಇರುವುವು. ಆಕೆಯ ಪಾದಗಳನ್ನು ಯಾವತ್ತೂ ಹಿಡಿದುಕೊಳ್ಳುವ ಭಕ್ತನು ಬೇರೆ ಇನ್ನಾವುದಕ್ಕೆ ತಾನೇ ಕಳವಳಪಡಬೇಕು? **ವಿದ್ಯಾಃ ಸಮಸ್ತಾ ತವ ದೇವಿ ಭೇದಾಃ** – ಜಗನ್ಮಾತೆಯೇ ಎಲ್ಲ ಬಗೆಯ ಜ್ಞಾನದ ಮೂರ್ತರೂಪಳಾಗಿದ್ದಾಳೆ. ಆಕೆಯೇ ಎಲ್ಲ ಶಾಸ್ತ್ರಗಳೂ ಆಗಿದ್ದಾಳೆ.

ಭಗವಂತನ ಕೃಪೆಯಿಂದ ಇಲ್ಲಿ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ. ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ಕೊಲ್ಕತಾದಲ್ಲಿ ಇದ್ದಾರೆ. ಅವರಿಗೆ ಆರೋಗ್ಯ ಅಷ್ಟು ಸರಿ ಇಲ್ಲ. ಪ್ರತಿವರ್ಷದಂತೆ ಈ ವರ್ಷವೂ ಮಲೇರಿಯಾ ಇಲ್ಲಿ ಹರಡುತ್ತಿದೆ. ನಿನಗೆ ನನ್ನ ಹಾರ್ದಿಕ ಶುಭಾಶಯಗಳು. ಪರೇಶ್, ಅಬನಿ, ಸುರೇಶ್, ಪ್ರಿಯ, ಪ್ರಭು – ಇವರೆಲ್ಲರಿಗೂ ಕೂಡ ನನ್ನ ಶುಭಾಶಯಗಳನ್ನು ತಿಳಿಸು.

ಶುಭಕಾಮನೆಗಳೊಂದಿಗೆ,

ನಿನ್ನವ
ಶಿವಾನಂದ



# ಅಲ್ಲಮಪ್ರಭುವಿನ ವಚನ–ನಿರ್ವಚನ

ಪಾರ್ವತಮ್ಮ ಚಂದ್ರಣ್ಣ

ವಚನಸಾಹಿತ್ಯದಲ್ಲಿ ಅಲ್ಲಮಪ್ರಭುಗಳದು ದೊಡ್ಡ ಹೆಸರು. ಅತ್ಯಂತ ಮಾರ್ಮಿಕವಾದ ಬೋಧನೆ ಅವರದು. ಅವರದೊಂದು ವಚನದ ವಿವರಣೆ ಈ ಲೇಖನದ ವಸ್ತು. ಮೈಸೂರು ನಿವಾಸಿಯಾದ ಲೇಖಕಿ ಶರಣಸಾಹಿತ್ಯದ ಆಳವಾದ ಅಧ್ಯಯನವನ್ನು ಮಾಡಿದ್ದಾರೆ. ಇವರ ಹಲವು ಲೇಖನಗಳು 'ವಿವೇಕಪ್ರಭ' ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿವೆ.

**ದಾರಿಗೊಂಡು ಹೋಹರೆಲ್ಲರು ನೀವು ಕೇಳಿರೆ**
**ಮೂರು ಬಟ್ಟೆಯ ಕೂಡಿದ ಠಾವಿನಲ್ಲಿ ಒಬ್ಬ ಹೆಮ್ಮಾರಿಯೈದಾಳೆ.**
**ಆ ಮಾರಿಯ ಬಾಯೊಳಗೆ ಮೂರು ಘಟವಿಪ್ಪವು,**
**ನಂಜಿನ ಸೊನೆ ಸುರಿವುತ್ತಿಪ್ಪುದು,**
**ಕಾಡಕೋಣನ ಮುಖದಲ್ಲಿ ಕತ್ತಲೆ ಕಾಣಲೀಸದು,**
**ಐವಾಯ ಹುಲಿ ಆಗುಳಿಸುತ್ತಿಪ್ಪುದು,**
**ಇವೆಲ್ಲವ ಗೆದ್ದಲ್ಲದೆ ಗುಹೇಶ್ವರನ ಕಾಣಬಾರದು.**

ಇಲ್ಲಿ ದಾರಿ ಎಂದರೆ ಪರಮಾತ್ಮನನ್ನು ಹೊಂದಲು ಕ್ರಮಿಸಬೇಕಾದ ಮಾರ್ಗ. ಇಂತಹ ಸಾಧನಾಪಥವಿಡಿದು ಸಾಗುವವರು ಸಾಧಕರು. ಅವರು ಸಾಧಿಸಬೇಕಾದುದು ಮುಕ್ತಿ ಅಥವಾ ಮೋಕ್ಷ. ಭವದ ಬಂಧನಗಳನ್ನೆಲ್ಲ ಕಳಚಿ ದುಃಖಗಳೆಲ್ಲವ ನೀಗಿ, ಪರಮಾರ್ಥ ಸುಖದ ಆನಂದ ಪಡೆಯಬೇಕೆಂಬ ಬಯಕೆ ಅವರಿಗೆ, ತಾವು ನಡೆಯುತ್ತಿರುವ ಸಾಧನೆಯ ಹಾದಿಯಲ್ಲಿ ಅವರು ಸುರಕ್ಷಿತವಾಗಿ ಸಾಗಬೇಕು, ತಮ್ಮ ಗುರುವನ್ನವರು ನಿರಾಯಾಸವಾಗಿ ತಲುಪಬೇಕೆಂಬ ಕಳಕಳಿ ಅಲ್ಲಮರಿಗೆ. ಆದ್ದರಿಂದ ಅಂತಹ ಸಾಧಕರನ್ನು ಕುರಿತು ಕೆಲವು ಹಿತನುಡಿಗಳನ್ನು, ಎಚ್ಚರಿಕೆಯ ಮಾತುಗಳನ್ನು ಈ ವಚನದಲ್ಲಿ ಆಡಿದ್ದಾರೆ.

**ಮೂರು ಬಟ್ಟೆ** ಎಂದರೆ ಮೂರು ದಾರಿಗಳು. ಅವುಗಳೆಂದರೆ ಕರ್ಮಮಾರ್ಗ, ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗ. ಭಕ್ತನಿಗೆ ಈ ಮೂರು ಮಾರ್ಗಗಳನ್ನು ಅಥವಾ ಇವುಗಳಲ್ಲಿ ಯಾವುದಾದರೂ ಒಂದು ಮಾರ್ಗವನ್ನು ಹಿಡಿದು ಮುನ್ನಡೆಯಬೇಕೆಂಬ ಭಾವ ಉದಿಸುವುದು ಮನಸ್ಸಿನಲ್ಲಿ ತಾನೇ. ಎಲ್ಲದಕ್ಕೂ ಮನಸ್ಸೇ ಮೂಲ. ಆದ್ದರಿಂದ ಸಾಧಕನ ಅಂತಃಕರಣ ಅಥವಾ ಮನಸ್ಸೇ ಈ ಮೂರು ಭಾವನೆಗಳು ನೆಲೆಸಿಕೊಂಡಿರುವ **'ಠಾವು'**. ಈ ತ್ರಿವಿಧ ಮಾರ್ಗಗಳ ಮೂಲಕ ನಡೆದು ಭಗವಂತನನ್ನು ಹೊಂದಬೇಕು ಎಂಬ ಸದಿಚ್ಛೆ ಸಾಧಕನ ಮನದಲ್ಲಿ ತುಂಬಿರುತ್ತದೆ. ಆದರೆ ಅದೇ ಮನಸ್ಸಿನಲ್ಲಿ ಒಬ್ಬಳು ಹೆಮ್ಮಾರಿ ಇದ್ದಾಳೆ. ಆಕೆಯೇ ಮಾಯೆ. ಈ ಮಾಯೆಯನ್ನು ಮನದಿಂದ ತೊಲಗಿಸಿಬಿಡುವುದು ಸುಲಭದ ಕೆಲಸವೇನಲ್ಲ. ದೇವಾಧಿದೇವತೆಗಳೂ ಮತ್ತು